# ಗಡ್ಡ ಬೋಳಿಸುವುದರ ವಿಧಿ

[ حكم حلق اللحية ]

[**Kannada –** ಕನ್ನಡ **–**كنادي ]


ಮುಹಮ್ಮದ್ ಹಂಝಾ ಪುತ್ತೂರು

محمد حمزة بتوري



IslamHouse.com

1435 – 2014

بِسْمِ اللهِ الرَّحْمَـنِ الرَّحِيم

## ಕುರ್‌ಆನ್ ಮತ್ತು ಸುನ್ನತ್ ಏನೆನ್ನುತ್ತದೆ?

ಅಲ್ಲಾಹು ಹೇಳುತ್ತಾನೆ:

﴿وَمَا كَانَ لِمُؤْمِنٍ وَلَا مُؤْمِنَةٍ إِذَا قَضَى اللَّهُ وَرَسُولُهُ أَمْرًا أَنْ يَكُونَ لَهُمُ الْخِيَرَةُ مِنْ أَمْرِهِمْ وَمَنْ يَعْصِ اللَّهَ وَرَسُولَهُ فَقَدْ ضَلَّ ضَلَالًا مُبِينًا﴾

**“ಅಲ್ಲಾಹು ಮತ್ತು ಅವನ ಸಂದೇಶವಾಹಕರು ಒಂದು ವಿಷಯವನ್ನು ತೀರ್ಮಾನಿಸಿದ ಬಳಿಕ ಸತ್ಯವಿಶ್ವಾಸಿಗಾಗಲಿ, ಸತ್ಯವಿಶ್ವಾಸಿನಿಗಾಗಲಿ ತಮ್ಮ ವಿಷಯಕ್ಕೆ ಸಂಬಂಧಿಸಿ ಮುಕ್ತವಾದ ಅಭಿಪ್ರಾಯವಿರುವುದು ಯುಕ್ತವಾದುದಲ್ಲ. ಯಾರು ಅಲ್ಲಾಹು ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡುವನೋ ಅವನು ಸ್ಪಷ್ಟವಾದ ವಿಧದಲ್ಲಿ ಪಥಭ್ರಷ್ಟನಾಗಿರುವನು.” [ಕುರ್‌ಆನ್ 33:36]**

ಇಬ್ನ್ ಕಸೀರ್ ಹೇಳುತ್ತಾರೆ:

فَهَذِهِ الْآيَةُ عَامَّةٌ فِي جَمِيعِ الْأُمُورِ، وَذَلِكَ أَنَّهُ إِذَا حَكَمَ اللَّهُ وَرَسُولُهُ بِشَيْءٍ، فَلَيْسَ لِأَحَدٍ مُخَالَفَتُهُ وَلَا اخْتِيَارَ لِأَحَدٍ هَهُنَا، وَلَا رَأْيَ وَلَا قَوْلَ.

**“ಈ ಆಯತ್ ಎಲ್ಲ ವಿಷಯಗಳಲ್ಲೂ ಸಾರ್ವತ್ರಿಕವಾಗಿದೆ. ಅದೇನೆಂದರೆ ಅಲ್ಲಾಹು ಮತ್ತು ಅವನ ರಸೂಲ್(ﷺ)ರವರು ಯಾವುದಾದರೊಂದು ವಿಷಯದಲ್ಲಿ ತೀರ್ಪು ನೀಡಿದರೆ ಅದಕ್ಕೆ ವಿರುದ್ಧವಾಗಿ ಚಲಿಸಲು ಯಾರಿಗೂ ಅನುಮತಿಯಿಲ್ಲ. ಇಲ್ಲಿ ಯಾರಿಗೂ ಆಯ್ಕೆ ಎಂಬುದು ಇಲ್ಲ. ಯಾವುದೇ ಅಭಿಪ್ರಾಯಕ್ಕಾಗಲಿ ಮಾತಿಗಾಗಲಿ ಇಲ್ಲಿ ಅವಕಾಶವಿಲ್ಲ.”**

ಇಬ್ನ್ ಉಮರ್(ؓ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

« أَنْهِكُوا الشَّوَارِبَ وَأَعْفُوا اللِّحَى »

**“ನೀವು ಮೀಸೆಯನ್ನು ಕತ್ತರಿಸಿರಿ ಮತ್ತು ಗಡ್ಡವನ್ನು ಬೆಳೆಸಿರಿ.” [ಅಲ್‌ಬುಖಾರಿ ಮತ್ತು ಮುಸ್ಲಿಮ್]**

ಒಮ್ಮೆ ಇಬ್ಬರು ಮಜೂಸಿಗಳ ಒಂದು ನಿಯೋಗವು ಮದೀನಕ್ಕೆ ಬಂದಿತು. ಅವರಿಬ್ಬರು ಪ್ರವಾದಿ(ﷺ)ರವರ ಬಳಿಗೆ ಬಂದರು. ಅವರು ಗಡ್ಡವನ್ನು ಬೋಳಿಸಿ ಮೀಸೆಯನ್ನು

ಬಿಟ್ಟಿದ್ದರು. ಪ್ರವಾದಿ(ﷺ)ರವರು ಅವರೆಡೆಗೆ ನೋಡಲು ಅಸಹ್ಯಪಟ್ಟರು. ಪ್ರವಾದಿ(ﷺ) ರವರು ಕೇಳಿದರು:

« وَيْلَكُمَا مَنْ أَمَرَكُمْ بِهَذَا؟ »

**"ನಿಮಗೆ ವಿನಾಶ ಕಾದಿದೆ! ನಿಮ್ಮೊಂದಿಗೆ ಹೀಗೆ ಮಾಡಲು ಆದೇಶಿಸಿದ್ದು ಯಾರು?"**

ಅವರಿಬ್ಬರು ಹೇಳಿದರು: "ನಮ್ಮ ಪ್ರಭು (ಅಂದರೆ ಕಿಸ್ರಾ ಚಕ್ರವರ್ತಿ) ಇದನ್ನು ಆದೇಶಿಸಿದ್ದಾರೆ." ಆಗ ಪ್ರವಾದಿ(ﷺ)ರವರು ಹೇಳಿದರು:

« وَلَكِنْ رَبِّي أَمَرَنِي بِإِعْفَاءِ لِحْيَتِي وَقَصِّ شَارِبِي. »

**"ಆದರೆ ನನ್ನೊಂದಿಗೆ ನನ್ನ ಪ್ರಭು (ಅಲ್ಲಾಹು) ಗಡ್ಡವನ್ನು ಬಿಡುವಂತೆ ಮತ್ತು ಮೀಸೆಯನ್ನು ಕತ್ತರಿಸುವಂತೆ ಆದೇಶಿಸಿದ್ದಾನೆ." [ಫಿಕ್‌ಹು ಸ್ಸೀರಃಕ್ಕೆ ಬರೆದ ಟಿಪ್ಪಣಿಯಲ್ಲಿ ಅಶ್ಶೈಖ್ ಅಲ್‌ಅಲ್ಬಾನೀ ಈ ಹದೀಸನ್ನು ಹಸನ್ ಎಂದಿದ್ದಾರೆ.]**

ಅಬೂ ಹುರೈರಾ(ﷺ)ರಿಂದ ವರದಿ: ಪ್ರವಾದಿ(ﷺ)ರವರು ಹೇಳಿದರು:

« جَزُّوا الشَّوَارِبَ وَأَرْخُوا اللِّحَى، خَالِفُوا الْمَجُوسَ. »

**"ಮೀಸೆಯನ್ನು ಕತ್ತರಿಸಿರಿ ಮತ್ತು ಗಡ್ಡವನ್ನು ಉದ್ದಕ್ಕೆ ಬಿಡಿರಿ. ಮಜೂಸಿಗಳಿಗೆ ವಿರುದ್ಧವಾಗಿರಿ." [ಮುಸ್ಲಿಮ್]**

ಜಾಬಿರ್ ಇಬ್ನ್ ಸಮುರಃ(ﷺ)ರಿಂದ ವರದಿ: ಅವರು ಹೇಳುತ್ತಾರೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ كَثِيرَ شَعْرِ اللِّحْيَةِ.

**"ಪ್ರವಾದಿ(ﷺ)ರವರು ಅಗಾಧ ಕೂದಲಿರುವ ಗಡ್ಡವನ್ನು ಹೊಂದಿದ್ದರು." [ಮುಸ್ಲಿಮ್]**

ಅಲೀ(ﷺ)ರಿಂದ ವರದಿ: ಅವರು ಹೇಳುತ್ತಾರೆ:

كَانَ رَسُولُ اللَّهِ صَلَّى اللَّهُ عَلَيْهِ وَسَلَّمَ كَثَّ اللِّحْيَةِ.

**"ಪ್ರವಾದಿ(ﷺ)ರವರು ಪೊದೆಯಂತಹ ಗಡ್ಡವನ್ನು ಹೊಂದಿದ್ದರು." [ಅಹ್ಮದ್, ಹಸನ್ ಆಗಿರುವ ಸನದ್‌ನೊಂದಿಗೆ]**

ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಪ್ರವಾದಿ(ﷺ)ರವರ ರೂಪವನ್ನು ವಿವರಿಸುತ್ತಾ ಅವರು ಹೇಳುತ್ತಾರೆ:

قَدْ مَلَأَتْ لِحْيَتُهُ مِنْ هَذِهِ إِلَى هَذِهِ حَتَّى كَادَتْ تَمْلَأُ نَحْرَهُ.

**“ಪ್ರವಾದಿ(ﷺ)ರವರ ಗಡ್ಡವು ಇಲ್ಲಿಂದ ಇಲ್ಲಿಯವರೆಗೆ ತುಂಬಿಕೊಂಡಿತ್ತು. ಎಲ್ಲಿಯ ವರೆಗೆಂದರೆ ಗಡ್ಡವು ಅವರ ಎದೆಯನ್ನು ತುಂಬಿಕೊಂಡಿತ್ತು.” [ಅಹ್ಮದ್, ಇದರ ಸನದ್ ಸಹೀಹ್ ಆಗಿದೆ]**

## ಅಶ್ಶೈಖ್ ಇಬ್ನ್ ಬಾಝ್ ಏನೆನ್ನುತ್ತಾರೆ?

**ಪ್ರಶ್ನೆ: ಗಡ್ಡವನ್ನು ಬೆಳೆಸುವುದು ಕಡ್ಡಾಯವೋ ಅಥವಾ ಸಮ್ಮತಾರ್ಹವೋ? ಅದನ್ನು ಬೋಳಿಸುವುದು ಪಾಪವೋ ಅಥವಾ ಧರ್ಮದಲ್ಲಿ ಮಾಡುವ ಒಡಕೋ? ಮೀಸೆಯನ್ನು ಬೆಳೆಸಿ ಗಡ್ಡವನ್ನು ಬೋಳಿಸುವುದಕ್ಕೆ ಅನುಮತಿಯಿದೆಯೋ?**

ಉತ್ತರ: ಸರ್ವಸ್ತುತಿಗಳು ಅಲ್ಲಾಹನಿಗೆ ಮಾತ್ರ. ರಸೂಲ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಮ್ ಇರಲಿ.

ಮುಂದುವರಿದು ಹೇಳುವುದೇನೆಂದರೆ:

ನನ್ನ ಒಬ್ಬ ಸಹೋದರನು ನನ್ನೊಂದಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿದ್ದಾನೆ:

1. ಗಡ್ಡವನ್ನು ಬೆಳೆಸುವುದು ಕಡ್ಡಾಯವೋ ಅಥವಾ ಸಮ್ಮತಾರ್ಹವೋ?
2. ಅದನ್ನು ಬೋಳಿಸುವುದು ಪಾಪವೋ ಅಥವಾ ಧರ್ಮದಲ್ಲಿ ಮಾಡುವ ಒಡಕೋ?
3. ಮೀಸೆಯನ್ನು ಬೆಳೆಸಿ ಗಡ್ಡವನ್ನು ಬೋಳಿಸುವುದಕ್ಕೆ ಅನುಮತಿಯಿದೆಯೋ?

ಈ ಪ್ರಶ್ನೆಗಳಿಗಿರುವ ಉತ್ತರವು:

ಅಲ್‌ಬುಖಾರಿ ಮತ್ತು ಮುಸ್ಲಿಮ್ ಇಬ್ನ್ ಉಮರ್(ರ)ರಿಂದ ವರದಿ ಮಾಡಿದ ಸಹೀಹಾದ ಒಂದು ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

« أَحْفُوا الشَّوَارِبَ وَوَفِّرُوا اللِّحَى خَالِفُوا الْمُشْرِكِينَ. »

**“ನೀವು ಮೀಸೆಯನ್ನು ಅಡಿಯಿಂದಲೇ ಕತ್ತರಿಸಿರಿ ಮತ್ತು ಗಡ್ಡವನ್ನು ಬೆಳೆಸಿರಿ (ಅಂದರೆ ಕತ್ತರಿಸದೆ ಬಿಟ್ಟುಬಿಡಿರಿ). ಮುಶ್ರಿಕ್‌ಗಳಿಗೆ ವಿರುದ್ಧವಾಗಿರಿ.”**

ಸಹೀಹ್ ಮುಸ್ಲಿಮ್‌ನಲ್ಲಿರುವ ಅಬೂ ಹುರೈರಾ(ರ)ರವರ ಹದೀಸಿನಲ್ಲಿ ಪ್ರವಾದಿ(ﷺ) ರವರು ಹೇಳುತ್ತಾರೆ:

« جَزُّوا الشَّوَارِبَ وَأَرْخُوا اللِّحَى خَالِفُوا الْمَجُوسَ. »

**“ನೀವು ಮೀಸೆಯನ್ನು ಕತ್ತರಿಸಿರಿ ಮತ್ತು ಗಡ್ಡವನ್ನು ಉದ್ದಕ್ಕೆ ಬಿಡಿರಿ. ಮಜೂಸಿಗಳಿಗೆ ವಿರುದ್ಧವಾಗಿರಿ.”**

ಅನ್ನಸಾಈ ಝೈದ್ ಇಬ್ನ್ ಅರ್ಖಮ್(ﷺ)ರಿಂದ ಸಹೀಹಾದ ಸನದ್‌ನೊಂದಿಗೆ ಉದ್ಧರಿಸಿದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

« مَنْ لَمْ يَأْخُذْ مِنْ شَارِبِهِ فَلَيْسَ مِنَّا »

**“ಯಾರು ತನ್ನ ಮೀಸೆಯನ್ನು ಕತ್ತರಿಸುವುದಿಲ್ಲವೋ ಅವನು ನಮ್ಮಲ್ಲಿ ಸೇರಿದವನಲ್ಲ.”**

ಮಹಾನ್ ವಿದ್ವಾಂಸರೂ ಸುಪ್ರಸಿದ್ಧ ಹಾಫಿಝ್‌ರೂ ಆದ ಮುಹಮ್ಮದ್ ಇಬ್ನ್ ಹಝ್ಮ್ ಹೇಳುತ್ತಾರೆ:

اتَّفَقَ الْعُلَمَاءُ عَلَى أَنَّ قَصَّ الشَّارِبِ وَإِعْفَاءَ اللِّحْيَةِ فَرْضٌ.

**“ಮೀಸೆಯನ್ನು ಕತ್ತರಿಸುವುದು ಮತ್ತು ಗಡ್ಡವನ್ನು ಬೆಳೆಸುವುದು ಕಡ್ಡಾಯವಾಗಿದೆಯೆಂಬ ವಿಷಯದಲ್ಲಿ ಉಲಮಾಗಳು ಒಮ್ಮತಾಭಿಪ್ರಾಯ ಹೊಂದಿದ್ದಾರೆ.”**

ಮೀಸೆಯನ್ನು ಕತ್ತರಿಸುವುದು ಮತ್ತು ಗಡ್ಡವನ್ನು ಬೆಳೆಸುವುದು ಎಂಬ ಈ ವಿಷಯ ದಲ್ಲಿ ಬಹಳಷ್ಟು ಹದೀಸ್‌ಗಳು ಮತ್ತು ಉಲಮಾಗಳ ಹೇಳಿಕೆಗಳಿವೆ. ಅವುಗಳೆಲ್ಲವನ್ನೂ ಇಲ್ಲಿ ಉಲ್ಲೇಖಿಸಲು ಸಾಧ್ಯವಿಲ್ಲ. ಈಗಾಗಲೇ ಉದ್ಧರಿಸಲಾದ ಹದೀಸ್‌ಗಳಲ್ಲಿ ಮತ್ತು ಇಬ್ನ್ ಹಝ್ಮ್ ಉದ್ಧರಿಸಿದ ಉಲಮಾಗಳ ಒಮ್ಮತಾಭಿಪ್ರಾಯದಲ್ಲಿ ಮೇಲಿನ ಮೂರು ಪ್ರಶ್ನೆಗಳಿಗೆ ಉತ್ತರವಿದೆ.

ಒಟ್ಟಿನಲ್ಲಿ ಗಡ್ಡವನ್ನು ಬೆಳೆಸುವುದು ಕಡ್ಡಾಯವಾಗಿದೆ. ಅದನ್ನು ಬೋಳಿಸುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಪ್ರವಾದಿ(ﷺ)ರವರು ಇದನ್ನು ಆದೇಶಿಸಿದ್ದಾರೆ. ಪ್ರವಾದಿ(ﷺ)ರವರ ಆದೇಶವು ಕಡ್ಡಾಯವನ್ನು ಸೂಚಿಸುತ್ತದೆ.

ಅಲ್ಲಾಹು ಹೇಳುತ್ತಾನೆ:

﴿وَمَا آتَاكُمُ الرَّسُولُ فَخُذُوهُ وَمَا نَهَاكُمْ عَنْهُ فَانْتَهُوا ﴾

**“ರಸೂಲ್(ﷺ)ರವರು ನಿಮಗೆ ಏನನ್ನು ನೀಡುತ್ತಾರೋ ಅದನ್ನು ಸ್ವೀಕರಿಸಿರಿ ಮತ್ತು ಅವರು ನಿಮ್ಮನ್ನು ಯಾವುದರಿಂದ ವಿರೋಧಿಸುತ್ತಾರೋ ಅದರಿಂದ ದೂರವಾಗಿರಿ.” [ಕುರ್‌ಆನ್ 59:7]**

ಅದೇ ರೀತಿ ಮೀಸೆಯನ್ನು ಅಡಿಯಿಂದಲೇ ಕತ್ತರಿಸುವುದು ಕಡ್ಡಾಯವಾಗಿದೆ. ಮೀಸೆಯನ್ನು ಬೆಳೆಸುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಅದು ಮೀಸೆಯನ್ನು ಕತ್ತರಿಸಿರಿ ಎಂಬ ಪ್ರವಾದಿ(ﷺ)ರವರ ವಚನಕ್ಕೆ ವಿರುದ್ಧವಾಗಿ ವರ್ತಿಸುವುದಾಗಿದೆ.

**"ಯಾರು ತನ್ನ ಮೀಸೆಯನ್ನು ಕತ್ತರಿಸುವುದಿಲ್ಲವೋ ಅವನು ನಮ್ಮಲ್ಲಿ ಸೇರಿದವನಲ್ಲ"** ಎಂಬ ಪ್ರವಾದಿ(ﷺ)ರವರ ವಚನವು ಈ ವಿಷಯದಲ್ಲಿರುವ ಘೋರ ಎಚ್ಚರಿಕೆಯಾಗಿದೆ. ಅಲ್ಲಾಹು ಮತ್ತು ಅವನ ರಸೂಲ್(ﷺ)ರವರು ಏನನ್ನು ವಿರೋಧಿಸುತ್ತಾರೋ ಅದರ ಬಗ್ಗೆ ಎಚ್ಚರ ವಹಿಸುವುದು ಮತ್ತು ಅಲ್ಲಾಹು ಹಾಗೂ ಅವನ ರಸೂಲ್(ﷺ)ರವರು ಏನನ್ನು ಆದೇಶಿಸುತ್ತಾರೋ ಅದರಲ್ಲಿ ಅವರ ಆಜ್ಞಾಪಾಲನೆ ಮಾಡುವುದು ಮುಸ್ಲಿಮನಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿದೆ.

ಇದರಿಂದ ತಿಳಿದುಬರುವಂತೆ ಮೀಸೆಯನ್ನು ಬೆಳೆಸುವುದು ಪಾಪ ಮತ್ತು ಆಜ್ಞೋಲ್ಲಂಘನೆಯಾಗಿದೆ. ಅದೇ ರೀತಿ ಗಡ್ಡವನ್ನು ಬೋಳಿಸುವುದು ಮತ್ತು ಗಿಡ್ಡಗೊಳಿಸುವುದು ಈಮಾನನ್ನು ಕುಂಠಿತಗೊಳಿಸುವ ಮತ್ತು ದುರ್ಬಲಗೊಳಿಸುವ ಪಾಪ ಮತ್ತು ಆಜ್ಞೋಲ್ಲಂಘನೆಗಳಲ್ಲಿ ಸೇರಿದ್ದಾಗಿದೆ. ಅಲ್ಲಾಹನ ಕೋಪ ಮತ್ತು ಶಿಕ್ಷೆಯು ಇಳಿಯುವ ಭಯವೂ ಇದರಲ್ಲಿದೆ.

ಮೀಸೆಯನ್ನು ಬೆಳೆಸುವುದು ಮತ್ತು ಗಡ್ಡವನ್ನು ಬೋಳಿಸುವುದು ಹಾಗೂ ಗಿಡ್ಡಗೊಳಿಸುವುದು ಮಜೂಸಿಗಳನ್ನು ಮತ್ತು ಮುಶ್ರಿಕ್‌ಗಳನ್ನು ಅನುಕರಣೆ ಮಾಡುವುದಾಗಿದೆಯೆಂದೂ ಮೇಲೆ ಉಲ್ಲೇಖಿಸಲಾದ ಹದೀಸ್‌ಗಳಲ್ಲಿವೆ. ಮಜೂಸಿಗಳನ್ನು ಮತ್ತು ಮುಶ್ರಿಕರನ್ನು ಅನುಕರಣೆ ಮಾಡುವುದು ನಿಷಿದ್ಧವಾಗಿದೆ. ಅದು ಸಮ್ಮತಾರ್ಹವಲ್ಲ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

« مَنْ تَشَبَّهَ بِقَوْمٍ فَهُوَ مِنْهُمْ »

**"ಯಾರು ಒಂದು ಜನತೆಯನ್ನು ಅನುಕರಿಸುತ್ತಾನೋ ಅವನು ಅವರಲ್ಲಿ ಸೇರಿದವನಾಗಿದ್ದಾನೆ."**

ನನ್ನ ಈ ಉತ್ತರವು ಪರ್ಯಾಪ್ತವೂ ತೃಪ್ತಿಕರವೂ ಆಗಿದೆಯೆಂದು ಆಶಿಸುತ್ತೇನೆ. ಯಶಸ್ಸನ್ನು ದಯಪಾಲಿಸುವವನು ಅಲ್ಲಾಹನಾಗಿದ್ದಾನೆ. ನಮ್ಮ ಪ್ರವಾದಿಯಾದ ಮುಹಮ್ಮದ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಮ್ ಇರಲಿ.

ಮೂಲ: http://www.binbaz.org.sa/mat/1696

**ಪ್ರಶ್ನೆ: ಗಡ್ಡವನ್ನು ಬೆಳೆಸುವುದು ಮುಸ್ಲಿಮನಲ್ಲಿ ಕಡ್ಡಾಯವಾಗಿ ಗೋಚರಿಸಬೇಕಾದ ವಿಷಯಗಳಲ್ಲಿ ಸೇರಿದ್ದಾಗಿದೆಯೇ?**

ಉತ್ತರ: ಪೂರ್ವಿಕ ಮತ್ತು ನಂತರದವರ ನೇತಾರರಾದ, ಸರ್ವಲೋಕಗಳ ಒಡೆಯನ ರಸೂಲರಾದ ಮುಹಮ್ಮದ್ ಇಬ್ನ್ ಅಬ್ದಿಲ್ಲಾಹ್(ﷺ)ರವರ ಆಜ್ಞಾಪಾಲನೆ ಮಾಡುತ್ತಾ

ಗಡ್ಡವನ್ನು ಬೆಳೆಸುವುದು ಮುಸ್ಲಿಮನಿಗೆ ಕಡ್ಡಾಯವಾಗಿದೆ. ಯಾಕೆಂದರೆ ಪ್ರವಾದಿ(ﷺ) ರವರು ಹೇಳುತ್ತಾರೆ:

« قَصُّوا الشَّوَارِبَ وَأَعْفُوا اللِّحَى خَالِفُوا الْمُشْرِكِينَ »

**"ನೀವು ಮೀಸೆಯನ್ನು ಕತ್ತರಿಸಿರಿ ಮತ್ತು ಗಡ್ಡವನ್ನು ಬೆಳೆಸಿರಿ. ಮುಶ್ರಿಕ್‌ಗಳಿಗೆ ವಿರುದ್ಧ ವಾಗಿರಿ."**

ಇದನ್ನು ಅಲ್‌ಬುಖಾರಿ ಮತ್ತು ಮುಸ್ಲಿಮ್ ಜಂಟಿಯಾಗಿ ಇಬ್ನ್ ಉಮರ್(ರ)ರಿಂದ ವರದಿ ಮಾಡಿದ್ದಾರೆ.

ಪ್ರವಾದಿ(ﷺ)ರವರು ಹೇಳಿದರು:

« جَزُّوا الشَّوَارِبَ وَأَرْخُوا اللِّحَى خَالِفُوا الْمَجُوسَ »

**"ಮೀಸೆಯನ್ನು ಕತ್ತರಿಸಿರಿ ಮತ್ತು ಗಡ್ಡವನ್ನು ಉದ್ದಕ್ಕೆ ಬಿಟ್ಟುಬಿಡಿರಿ. ಮಜೂಸಿಗಳಿಗೆ ವಿರುದ್ಧವಾಗಿರಿ."**

ಇದನ್ನು ಮುಸ್ಲಿಮ್ ಅಬೂ ಹುರೈರಾ(ರ)ರಿಂದ ವರದಿ ಮಾಡಿದ್ದಾರೆ.

ನಮಗೆಲ್ಲರಿಗೂ ತಿಳಿದಿರುವ ಪ್ರಕಾರ ಐಹಿಕವಾದ ಮತ್ತು ಪಾರಲೌಕಿಕವಾದ ಸರ್ವ ಒಳಿತುಗಳೂ ಸಾಕ್ಷಾತ್ಕಾರವಾಗುವುದು ಪ್ರವಾದಿ(ﷺ)ರವರ ಆಜ್ಞಾಪಾಲನೆ ಮತ್ತು ಅನುಸರಣೆ ಮಾಡುವುದರಲ್ಲಾಗಿದೆ. ಎಲ್ಲ ವಿಧ ಕೆಡುಕುಗಳಿರುವುದು ಅಲ್ಲಾಹು ಮತ್ತು ಅವನ ರಸೂಲ್(ﷺ)ರವರ ಆಜ್ಞೋಲ್ಲಂಘನೆ ಮಾಡುವುದರಲ್ಲಿ ಹಾಗೂ ಸ್ವೇಚ್ಛೆ ಮತ್ತು ಶೈತಾನನನ್ನು ಅನುಸರಿಸುವುದರಲ್ಲಾಗಿದೆ.

ಅಲ್ಲಾಹು ತಆಲಾ ಹೇಳುತ್ತಾನೆ:

﴿ قُلْ إِنْ كُنْتُمْ تُحِبُّونَ اللَّهَ فَاتَّبِعُونِي يُحْبِبْكُمُ اللَّهُ وَيَغْفِرْ لَكُمْ ذُنُوبَكُمْ ﴾

**"ಹೇಳಿರಿ: ನೀವು ಅಲ್ಲಾಹನನ್ನು ಪ್ರೀತಿಸುತ್ತೀರಿ ಎಂದಾದರೆ ನನ್ನನ್ನು ಅನುಸರಿಸಿರಿ. ಹಾಗಾದರೆ ಅಲ್ಲಾಹು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು." [ಕುರ್‌ಆನ್ 3:31]**

ಅಲ್ಲಾಹು ತಆಲಾ ಹೇಳುತ್ತಾನೆ:

﴿ فَأَمَّا مَنْ طَغَى * وَآثَرَ الْحَيَاةَ الدُّنْيَا * فَإِنَّ الْجَحِيمَ هِيَ الْمَأْوَى * وَأَمَّا مَنْ خَافَ مَقَامَ رَبِّهِ وَنَهَى النَّفْسَ عَنِ الْهَوَى * فَإِنَّ الْجَنَّةَ هِيَ الْمَأْوَى ﴾

**“ಮಿತಿಮೀರಿದವನು ಮತ್ತು ಇಹಲೋಕ ಜೀವನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದವನಾರೋ, ಖಂಡಿತವಾಗಿಯೂ ಜ್ವಲಿಸುವ ನರಕಾಗ್ನಿಯೇ (ಅವನ) ವಾಸ ಸ್ಥಳವಾಗಿರುವುದು. ಆದರೆ ಯಾರು ತನ್ನ ರಬ್ಬ್‌ನ ಸ್ಥಾನವನ್ನು ಭಯಪಡುವನೋ ಮತ್ತು ಮನಸ್ಸನ್ನು ದೇಹೇಚ್ಛೆಗಳಿಂದ ನಿಗ್ರಹಿಸುವನೋ, ಖಂಡಿತವಾಗಿಯೂ ಸ್ವರ್ಗವೇ (ಅವನಿಗಿರುವ) ವಾಸಸ್ಥಳವಾಗಿರುವುದು.” [ಕುರ್‌ಆನ್ 79:37–41]**

ಊಹೆ ಮತ್ತು ಸ್ವೇಚ್ಛೆಯನ್ನು ಅನುಸರಿಸಿದ್ದಕ್ಕಾಗಿ ಅಲ್ಲಾಹು ಮುಶ್ರಿಕ್‌ಗಳನ್ನು ತೆಗಳಿ ದ್ದಾನೆ. ಅಲ್ಲಾಹು ಅಝ್ಝ ವಜಲ್ಲ್ ಸೂರಃ ಅನ್ನಜ್ಮ್‌ನಲ್ಲಿ ಹೇಳುತ್ತಾನೆ:

﴿إِنْ يَتَّبِعُونَ إِلَّا الظَّنَّ وَمَا تَهْوَى الْأَنْفُسُ وَلَقَدْ جَاءَهُمْ مِنْ رَبِّهِمُ الْهُدَىٰ﴾

**“ಅವರು ಅನುಸರಿಸುತ್ತಿರುವುದು ಊಹೆ ಮತ್ತು ಸ್ವೇಚ್ಛೆಯನ್ನು ಮಾತ್ರವಾಗಿದೆ. ಅವರ ಬಳಿಗೆ ಅವರ ಪ್ರಭುವಿನ ವತಿಯ ಸನ್ಮಾರ್ಗವು ಬಂದುಬಿಟ್ಟಿದೆ.” [ಕುರ್‌ಆನ್ 53:23]**

ಪ್ರವಾದಿ(ﷺ)ರವರು ಹೇಳಿದರು:

« كُلُّ أُمَّتِي يَدْخُلُونَ الْجَنَّةَ إِلَّا مَنْ أَبَى »

**“ನನ್ನ ಸಮುದಾಯದಲ್ಲಿ ಸೇರಿದ ಎಲ್ಲರೂ ಸ್ವರ್ಗವನ್ನು ಪ್ರವೇಶಿಸುವರು. ನಿರಾಕರಿಸಿ ದವರ ಹೊರತು.”**

ಸಹಾಬಾಗಳು ಕೇಳಿದರು: “ಓ ಅಲ್ಲಾಹನ ರಸೂಲರೇ? ನಿರಾಕರಿಸಿದವರು ಎಂದರೆ ಯಾರು?”

ಪ್ರವಾದಿ(ﷺ)ರವರು ಹೇಳಿದರು:

« مَنْ أَطَاعَنِي دَخَلَ الْجَنَّةَ وَمَنْ عَصَانِي دَخَلَ النَّارَ »

**“ನನ್ನ ಆಜ್ಞಾಪಾಲನೆ ಮಾಡಿದವನು ಸ್ವರ್ಗವನ್ನು ಪ್ರವೇಶಿಸಿದನು ಮತ್ತು ನನ್ನ ಆಜ್ಞೋಲ್ಲಂಘನೆ ಮಾಡಿದವನು ನರಕಾಗ್ನಿಯನ್ನು ಪ್ರವೇಶಿಸಿದನು.”**

ಇದನ್ನು ಅಲ್‌ಬುಖಾರಿ ತಮ್ಮ ‘ಸಹೀಹ್’ನಲ್ಲಿ ವರದಿ ಮಾಡಿದ್ದಾರೆ.

ಅಲ್ಲಾಹು ಮತ್ತು ಅವನ ರಸೂಲ್(ﷺ)ರವರ ಆಜ್ಞಾಪಾಲನೆ ಮಾಡುವುದಕ್ಕಿರುವ ಆದೇಶ ಹಾಗೂ ಅಲ್ಲಾಹು ಮತ್ತು ಅವರ ರಸೂಲ್(ﷺ)ರವರ ಆಜ್ಞೋಲ್ಲಂಘನೆ ಮಾಡುವುದಕ್ಕಿರುವ ವಿರೋಧವನ್ನು ಸೂಚಿಸುವ ಆಯತ್‌ಗಳು ಮತ್ತು ಹದೀಸ್‌ಗಳು ಬಹಳಷ್ಟಿವೆ.

ಅಲ್ಲಾಹನ ಆಜ್ಞಾಪಾಲನೆ ಮಾಡಲು, ಅವನನ್ನು ಮಾತ್ರ ಆರಾಧಿಸಲು ಮತ್ತು ಅವನಿಗೆ ನಿಷ್ಕಳಂಕವಾಗಿರಲು ಹಾಗೂ ಅವನ ರಸೂಲರಾದ ಮುಹಮ್ಮದ್(ﷺ)ರವರ

ಅನುಸರಣೆ ಮಾಡಲು ಮತ್ತು ಅವರು ತಂದಿರುವುದನ್ನು ಬಿಗಿಯಾಗಿ ಹಿಡಿದುಕೊಳ್ಳಲು ಮುಸ್ಲಿಮರೆಲ್ಲರಿಗೂ ತೌಫೀಕ್ ನೀಡುವಂತೆ ನಾವು ಅಲ್ಲಾಹನೊಂದಿಗೆ ಬೇಡುತ್ತೇವೆ. ಅವನು ಎಲ್ಲವನ್ನೂ ಆಲಿಸುವವನೂ ಅತಿ ಹತ್ತಿರದಲ್ಲಿರುವವನೂ ಆಗಿದ್ದಾನೆ.

ಮೂಲ: http://www.binbaz.org.sa/mat/1697

## ಅಶ್ಶೈಖ್ ಅಲ್‌ಉಸೈಮೀನ್ ಏನೆನ್ನುತ್ತಾರೆ?

**ಪ್ರಶ್ನೆ: ಗೌರವಾನ್ವಿತ ಶೈಖ್‌ರವರೇ, ಗಡ್ಡ ಬೋಳಿಸುವುದನ್ನು ಮಹಾಪಾಪಗಳಲ್ಲಿ ಸೇರಿದ್ದೆಂದು ಪರಿಗಣಿಸಲಾಗುತ್ತದೆಯೇ? ಗಡ್ಡ ಬೋಳಿಸುವವನಿಗೆ ಕಠಿಣವಾದ ಶಿಕ್ಷೆಯಿದೆಯೆಂದು ಪ್ರವಾದಿ(ﷺ)ರವರಿಂದ ವರದಿಯಾದ ಹದೀಸ್ ಯಾವುದಾದರೂ ಇದೆಯೇ? ತಾವು ನನಗೆ ವಿವರಿಸಿಕೊಡಬೇಕೆಂದು ವಿನಂತಿಸುತ್ತಿದ್ದೇನೆ.**

ಉತ್ತರ: ಗಡ್ಡ ಬೋಳಿಸುವವರ ನಿರಂತರತೆಯನ್ನು ಪರಿಗಣಿಸಿ ಗಡ್ಡ ಬೋಳಿಸುವುದನ್ನು ಮಹಾಪಾಪಗಳಲ್ಲಿ ಸೇರಿದ್ದೆಂದು ಹೇಳಬಹುದು. ಅಂದರೆ ಗಡ್ಡ ಬೋಳಿಸುವವರು ಆ ವಿಷಯದಲ್ಲಿ ದೃಢವಾಗಿ ನಿಂತು ನಿರಂತರವಾಗಿ ಗಡ್ಡ ಬೋಳಿಸುವುದಾದರೆ ಮತ್ತು ಬಹಿರಂಗವಾಗಿ ಪ್ರವಾದಿ(ﷺ)ರವರ ಸುನ್ನತ್ತನ್ನು ವಿರೋಧಿಸುವುದಾದರೆ ಆ ಕಾರಣದಿಂದಾಗಿ ಗಡ್ಡ ಬೋಳಿಸುವುದು ಮಹಾಪಾಪವಾಗುತ್ತದೆ. ಅಂದರೆ ಆ ವಿಷಯದಲ್ಲಿ ಅವರು ಹಟಹಿಡಿದು ನಿಲ್ಲುವುದರಿಂದ.

ಇನ್ನು ಈ ವಿಷಯದಲ್ಲಿ ವರದಿಯಾದ ಹದೀಸ್‌ಗಳ ಬಗ್ಗೆ ಹೇಳುವುದಾದರೆ ಅದು ಅಂದರೆ ಗಡ್ಡವನ್ನು ಬೆಳೆಸುವುದು ಅಲ್‌ಫಿತ್ರಃದಲ್ಲಿ (ಪ್ರಕೃತಿಯಲ್ಲಿ) ಸೇರಿದ್ದಾಗಿದೆಯೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ. ಇದರ ಪ್ರಕಾರ ಗಡ್ಡ ಬೋಳಿಸುವವನು, ಅಲ್ಲಾಹು ಮನುಷ್ಯರನ್ನು ಯಾವ ಪ್ರಕೃತಿಯಲ್ಲಿ ಸೃಷ್ಟಿಸಿದ್ದಾನೋ ಅದಕ್ಕೆ ವಿರುದ್ಧವಾಗಿ ಚಲಿಸುವವನಾಗಿದ್ದಾನೆ.

ಎರಡನೆಯದಾಗಿ, ಗಡ್ಡ ಬೋಳಿಸುವುದು ಮುಶ್ರಿಕ್‌ಗಳ ಮತ್ತು ಮಜೂಸಿಗಳ ಚರ್ಯೆಯಾಗಿದೆಯೆಂದು ಪ್ರವಾದಿ(ﷺ)ರವರು ಹೇಳಿದ್ದಾರೆ. ಮಜೂಸಿಗಳಿಗೆ ಮತ್ತು ಮುಶ್ರಿಕ್‌ಗಳಿಗೆ ವಿರುದ್ಧವಾಗಿರಬೇಕೆಂದು ನಮ್ಮೊಂದಿಗೆ ಆದೇಶಿಸಲಾಗಿದೆ. ಮಾತ್ರವಲ್ಲ, ಎಲ್ಲ ಕಾಫಿರ್‌ಗಳಿಗೂ ವಿರುದ್ಧವಾಗಿರಬೇಕೆಂದು ನಮ್ಮೊಂದಿಗೆ ಆದೇಶಿಸಲಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

« مَنْ تَشَبَّهَ بِقَوْمٍ فَهُوَ مِنْهُمْ »

**"ಯಾರು ಒಂದು ಜನತೆಯನ್ನು ಅನುಕರಿಸುತ್ತಾರೋ ಅವನು ಅವರಲ್ಲಿ ಸೇರಿದವನಾಗಿದ್ದಾನೆ."**

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ: ಈ ಹದೀಸಿನ ಬಾಹ್ಯಾರ್ಥವು ಅನುಕರಣೆ ಮಾಡುವವನು ಕಾಫಿರ್ ಆಗಿದ್ದಾನೆಂದು ಸೂಚಿಸುತ್ತದೆಯಾದರೂ ಅದರ ಕನಿಷ್ಠ ಅವಸ್ಥೆಯು ಸೂಚಿಸುವ ಪ್ರಕಾರ ಅನುಕರಣೆ ಮಾಡುವುದು ಹರಾಮ್ ಆಗಿದೆ.

ನಾಲ್ಕನೆಯದಾಗಿ, ಪ್ರವಾದಿ(ﷺ)ರವರು ಗಡ್ಡ ಬೆಳೆಸಬೇಕೆಂದು ಆದೇಶಿಸಿದ್ದಾರೆ. ಗಡ್ಡವನ್ನು ಬೆಳೆಸಿರಿ, ಮುಶ್ರಿಕ್‌ಗಳಿಗೆ ವಿರುದ್ಧವಾಗಿರಿ, ಮಜೂಸಿಗಳಿಗೆ ವಿರುದ್ಧವಾಗಿರಿ ಎಂದು ಪ್ರವಾದಿ(ﷺ)ರವರು ಹೇಳಿದ್ದಾರೆ. ಹೆಚ್ಚಿನ ವಿದ್ವಾಂಸರ ಅಭಿಪ್ರಾಯದಂತೆ ಮೂಲ ನಿಯಮದ ಪ್ರಕಾರ ಅಲ್ಲಾಹು ಹಾಗೂ ಅವನ ರಸೂಲ್(ﷺ)ರವರ ಆದೇಶಗಳು ಕಡ್ಡಾಯತೆಯನ್ನು ಸೂಚಿಸುತ್ತದೆ. ಆದರೆ ಅದು ಕಡ್ಡಾಯವಲ್ಲ ಎಂಬುದಕ್ಕೆ ಬೇರೆ ಪುರಾವೆಗಳಿರುವ ಹೊರತು.

ಐದನೆಯದಾಗಿ, ಗಡ್ಡ ಬೆಳೆಸುವುದು ಪ್ರವಾದಿ(ﷺ)ರವರ ಮತ್ತು ಇತರ ಪ್ರವಾದಿಗಳ ಚರ್ಯೆಯಾಗಿದೆ. ಹಾರೂನ್(ﷺ)ರವರು ತಮ್ಮ ಸಹೋದರ ಮೂಸಾ(ﷺ)ರೊಂದಿಗೆ ಹೇಳಿದ ಮಾತನ್ನು ಅಲ್ಲಾಹು ಉದ್ಧರಿಸಿದ್ದಾನೆ:

﴿ يَا ابْنَ أُمَّ لَا تَأْخُذْ بِلِحْيَتِي وَلَا بِرَأْسِي﴾

**"ಓ ನನ್ನ ತಾಯಿಯ ಮಗನೇ! ತಾವು ನನ್ನ ಗಡ್ಡವನ್ನಾಗಲಿ ನನ್ನ ತಲೆಯನ್ನಾಗಲಿ ಹಿಡಿಯದಿರಿ." [ಕುರ್‌ಆನ್ 20:94]**

ಪ್ರವಾದಿ(ﷺ)ರವರಿಗೆ ದಪ್ಪವಾದ ಪೊದೆಯಂತಿರುವ ಗಡ್ಡವಿತ್ತೆಂದು ಸುನ್ನತ್ತಿನ ಬಗ್ಗೆ ಅರಿವುಳ್ಳವರಿಗೆ ತಿಳಿದಿದೆ. ಅಂಬಿಯಾ ಮುರ್ಸಲೀನ್‌ಗಳ ಮತ್ತು ಮುಶ್ರಿಕರ ಚರ್ಯೆಯಲ್ಲಿ ಯಾವುದಾದರೊಂದನ್ನು ಆರಿಸುವಂತೆ ಬುದ್ಧಿಯುಳ್ಳ ಒಬ್ಬ ವ್ಯಕ್ತಿಯೊಂದಿಗೆ ಹೇಳಲಾದರೆ ಅವನು ಬುದ್ಧಿವಂತನಾಗಿದ್ದರೆ ಯಾವುದನ್ನು ಆರಿಸುವನು? ಅವನು ಅಂಬಿಯಾ ಮುರ್ಸಲೀನ್‌ಗಳ ಚರ್ಯೆಯನ್ನು ಆರಿಸುವನು. ಮಜೂಸಿಗಳ ಮತ್ತು ಮುಶ್ರಿಕ್‌ಗಳ ಚರ್ಯೆಯಿಂದ ದೂರ ಸಾಗುವನು.

ಆದ್ದರಿಂದ ಅಲ್ಲಾಹನನ್ನು ಭಯಪಡುವಂತೆ ನಮ್ಮ ಮುಸ್ಲಿಮ್ ಸಹೋದರರಿಗೆ ನಾನು ಉಪದೇಶ ನೀಡುತ್ತಿದ್ದೇನೆ. ಅಲ್ಲಾಹನನ್ನು ಭಯಪಡಿರಿ. ಗಡ್ಡವನ್ನು ಬೆಳೆಸುವ ವಿಷಯದಲ್ಲಿ ಪ್ರವಾದಿ(ﷺ)ರವರ ಆದೇಶವನ್ನು ಪಾಲಿಸಿರಿ. ಯಾಕೆಂದರೆ ಅಲ್ಲಾಹು ತಆಲಾ ಹೇಳುತ್ತಾನೆ:

﴿فَلْيَحْذَرِ الَّذِينَ يُخَالِفُونَ عَنْ أَمْرِهِ أَنْ تُصِيبَهُمْ فِتْنَةٌ أَوْ يُصِيبَهُمْ عَذَابٌ أَلِيمٌ ﴾

**“ಆದ್ದರಿಂದ ಪ್ರವಾದಿಯವರ ಆಜ್ಞೆಗೆ ವಿರೋಧವಾಗಿ ಸಾಗುವವರು ತಮಗೇನಾದರೂ ಆಪತ್ತು ತಗಲುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ ತಗಲುವುದರ ಬಗ್ಗೆ ಭಯಪಡಲಿ.” [ಕುರ್‌ಆನ್ 24:63]**

ಇಮಾಮ್ ಅಹ್ಮದ್ ಹೇಳುತ್ತಾರೆ: “ಫಿತ್ನಃ ಎಂದರೆ ಏನೆಂದು ತಮಗೆ ಗೊತ್ತಿದೆಯೇ? ಫಿತ್ನಃ ಎಂದರೆ ಶಿರ್ಕ್ ಆಗಿದೆ. ಪ್ರವಾದಿ(ﷺ)ರವರ ಯಾವುದಾದರೂ ವಚನವನ್ನು ತಿರಸ್ಕರಿಸಿದರೆ ಅದರಿಂದ ಹೃದಯದಲ್ಲಿ ಧಿಕ್ಕಾರ ಮನೋಭಾವವು ಬೆಳೆದು ಅವನು ನಾಶವಾಗುವ ಭಯವಿದೆ.”

ಆದ್ದರಿಂದ ಈ ವಿಷಯವು ಗಂಭೀರವಾಗಿದೆ. ಅಲ್ಲಾಹನನ್ನು ಭಯಪಡಬೇಕೆಂದು ನಮ್ಮೆಲ್ಲ ಮುಸ್ಲಿಮ್ ಸಹೋದರರೊಂದಿಗೆ ನಾವು ಹೇಳುತ್ತಿದ್ದೇವೆ. ಪ್ರವಾದಿ(ﷺ)ರವರ ಚರ್ಯೆಯನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ಅದರಿಂದ ನಿಮಗೆ ಪುಣ್ಯವು ಸಿಗುತ್ತದೆ. ಗಡ್ಡವನ್ನು ಬೆಳೆಸುವುದರಿಂದ ಉತ್ತಮವಾದ ಚಹರೆಯು ಲಭ್ಯವಾಗುತ್ತದೆ. ಅಲ್ಲಾಹು ಗಡ್ಡದ ಮೂಲಕ ಪುರುಷರನ್ನು ಸುಂದರಗೊಳಿಸಿದ್ದಾನೆ. ಅದರಿಂದ ಉತ್ತಮವಾದ ಚಹರೆಯು ಲಭ್ಯವಾಗುತ್ತದೆ. ಉತ್ತಮವಾದ ಹೃದಯವು ಲಭ್ಯವಾಗುತ್ತದೆ. ಯಾಕೆಂದರೆ ಮನುಷ್ಯನು ಅಲ್ಲಾಹನ ಧರ್ಮವನ್ನು ಬಿಗಿಯಾಗಿ ಹಿಡಿಯುವುದನ್ನು ಹೆಚ್ಚಿಸಿದಾಗಲೆಲ್ಲ ಅವನ ಹೃದಯವು ಉತ್ತಮವಾಗುವುದು ಕೂಡ ಹೆಚ್ಚುತ್ತದೆ. ಅಲ್ಲಾಹು ಹೇಳುವ ಮಾತನ್ನು ಕೇಳಿರಿ:

﴿مَنْ عَمِلَ صَالِحًا مِنْ ذَكَرٍ أَوْ أُنْثَىٰ وَهُوَ مُؤْمِنٌ فَلَنُحْيِيَنَّهُ حَيَاةً طَيِّبَةً وَلَنَجْزِيَنَّهُمْ أَجْرَهُمْ بِأَحْسَنِ مَا كَانُوا يَعْمَلُونَ﴾

**“ಗಂಡಾಗಲಿ, ಹೆಣ್ಣಾಗಲಿ ಸತ್ಯವಿಶ್ವಾಸಿಯಾಗಿರುತ್ತಾ ಯಾರು ಸತ್ಕರ್ಮಗಳನ್ನು ಮಾಡುವರೋ ಖಂಡಿತವಾಗಿಯೂ ನಾವು ಆ ವ್ಯಕ್ತಿಗೆ ಉತ್ತಮವಾದ ಬದುಕನ್ನು ನೀಡುವೆವು. ಅವರು ಮಾಡುತ್ತಿರುವ ಕರ್ಮಗಳಲ್ಲಿ ಅತ್ಯುತ್ತಮವಾಗಿರುವುದಕ್ಕೆ ಅನುಗುಣವಾಗಿ ನಾವು ಅವರಿಗಿರುವ ಪ್ರತಿಫಲವನ್ನು ನೀಡುವೆವು.” [ಕುರ್‌ಆನ್ 16:97]**

ಅಂದರೆ ಅವನಿಗೆ ನಾವು ಅತ್ಯುತ್ತಮವಾದ ಬದುಕನ್ನು ಕರುಣಿಸುವೆವು. ಅವನ ಸಂಪತ್ತನ್ನು ಹೆಚ್ಚಿಸುವೆವೆಂದೋ ಅಥವಾ ಅವನಿಗೆ ಮನರಂಜನೆಯನ್ನು ನೀಡು ವೆವೆಂದೋ ಅಲ್ಲಾಹು ಹೇಳಿಲ್ಲ. ಬದಲಾಗಿ ಅವನಿಗೆ ಅತ್ಯುತ್ತಮವಾದ ಬದುಕನ್ನು ಕರುಣಿಸುವೆವು ಎಂದು ಅಲ್ಲಾಹು ಹೇಳಿದ್ದಾನೆ. ಅವನು ಬಡವನಾದರೂ ಸರಿ. ಅವನ ಹೃದಯವು ಮನಶ್ಶಾಂತಿಯಿಂದ ಕೂಡಿರುವುದು. ಅವನು ಅಲ್ಲಾಹನ ತೀರ್ಮಾನ ಮತ್ತು ವಿಧಿಯಲ್ಲಿ ಸಂತೃಪ್ತನಾಗಿರುವನು. ಅವನ ಬದುಕು ಅತ್ಯುತ್ತಮವಾಗಿರುವುದು. ಅಲ್ಲಾಹು ಅವನ ಸ್ಮರಣೆಯಿಂದ ಮತ್ತು ಅವನಲ್ಲಿರುವ ವಿಶ್ವಾಸದಿಂದ ನಮ್ಮ ಹೃದಯವನ್ನು ಅತ್ಯುತ್ತಮಗೊಳಿಸಲಿ ಮತ್ತು ಮುಸ್ಲಿಮರೆಲ್ಲರೂ ರಸೂಲ್(ﷺ)ರವರ

ಸುನ್ನತ್ತಿನಿಂದ ಮಾರ್ಗದರ್ಶನ ಪಡೆಯುವಂತೆ ಮಾಡಲಿ ಎಂದು ನಾವು ಅಲ್ಲಾಹ ನೊಂದಿಗೆ ಪ್ರಾರ್ಥಿಸುತ್ತೇವೆ.

ಮೂಲ: http://www.ibnothaimeen.com/all/noor/article_1295.shtml

**ಪ್ರಶ್ನೆ: ಶರೀಅತ್ತಿನ ಪ್ರಕಾರ ಗಡ್ಡದ ಮಿತಿಗಳೇನು? ಕಿವಿಗಳ ಬದಿಯಿಂದ ಗಲ್ಲದ ತನಕ ಬೆಳೆಯುವ ಕೂದಲು ಗಡ್ಡದಲ್ಲಿ ಸೇರಿದ್ದಾಗಿದೆಯೇ ಅಥವಾ ಅಲ್ಲವೇ? ಗಡ್ಡವನ್ನು ಗಲ್ಲಕ್ಕೆ ಮಾತ್ರ ಸೀಮಿತಗೊಳಿಸುವವರ ವಿಧಿಯೇನು? ಅಂದರೆ ಅವರು ಎರಡು ಕೆನ್ನೆಗಳಲ್ಲಿರುವ ಕೂದಲುಗಳನ್ನು ಬೋಳಿಸುತ್ತಾರೆ. ನನ್ನ ಈ ಪ್ರಶ್ನೆಗೆ ಉತ್ತರ ಕೊಡಿರಿ. ಅಲ್ಲಾಹು ತಮಗೆ ಉತ್ತಮ ಪ್ರತಿಫಲವನ್ನು ನೀಡಲಿ.**

ಉತ್ತರ: ಗಡ್ಡವೆಂದರೆ ಅದು ಎರಡು ಕೆನ್ನೆಗಳಲ್ಲಿರುವ ಮತ್ತು ಮುಖದಲ್ಲಿರುವ ಕೂದಲುಗಳಾಗಿವೆ. ಆದರೆ ಅದರ ಪ್ರತಿಯೊಂದು ಭಾಗಕ್ಕೂ ಒಂದೊಂದು ಹೆಸರಿದೆ. ಎಡ ಮತ್ತು ಬಲಬದಿಗಳಲ್ಲಿರುವ ಕೂದಲುಗಳನ್ನು ಆರಿದಾನ್ (عارضان) ಎನ್ನಲಾಗುತ್ತದೆ. ಇವೆರಡು ಒಂದುಗೂಡುವ ಕೆಳಗಿನ ಭಾಗವನ್ನು ದಿಕನ್ (ذقن) ಎನ್ನಲಾಗುತ್ತದೆ. ಇವೆಲ್ಲವೂ ಗಡ್ಡ ಎಂಬ ಹೆಸರಲ್ಲಿ ಒಳಪಡುತ್ತವೆ. ಆದ್ದರಿಂದ ಗಡ್ಡವು ಮುಖದಲ್ಲಿರುವ ಎಲ್ಲ ಕೂದಲುಗಳನ್ನೂ ಒಳಗೊಳ್ಳುತ್ತದೆ. ಇದರಿಂದ ಏನನ್ನೂ ಬೋಳಿಸಲು ಯಾರಿಗೂ ಅನುಮತಿಯಿಲ್ಲ. ಯಾಕೆಂದರೆ ಅದು ಪ್ರವಾದಿ(ﷺ)ರವರ ಆದೇಶಕ್ಕೆ ವಿರುದ್ಧವಾಗಿದೆ. ಪ್ರವಾದಿ(ﷺ)ರವರು ಹೇಳಿದರು: “ಮುಶ್ರಿಕ್‌ಗಳಿಗೆ ವಿರುದ್ಧವಾಗಿರಿ. ಗಡ್ಡವನ್ನು ಬೆಳೆಸಿರಿ ಮತ್ತು ಮೀಸೆಯನ್ನು ಕತ್ತರಿಸಿರಿ.” ಮತ್ತು ಅವರು ಹೇಳಿದರು: “ಮಜೂಸಿಗಳಿಗೆ ವಿರುದ್ಧವಾಗಿರಿ. ಗಡ್ಡವನ್ನು ಬೆಳೆಸಿರಿ ಮತ್ತು ಮೀಸೆಯನ್ನು ಕತ್ತರಿಸಿರಿ.” ಇಬ್ನ್ ಉಮರ್(ﷺ)ರವರು ಹಜ್ಜ್ ನಿರ್ವಹಿಸಿದ ಬಳಿಕ ತಮ್ಮ ಗಡ್ಡವನ್ನು ಹಿಡಿದು ಒಂದು ಹಿಡಿಗಿಂತ ಹೆಚ್ಚಿಗೆ ಇರುವುದನ್ನು ಕತ್ತರಿಸುತ್ತಿದ್ದರು ಎಂಬುದು ಕೆಲವರಲ್ಲಿ ಗೊಂದಲವನ್ನು ಸೃಷ್ಟಿಸಿದೆ. ಇಬ್ನ್ ಉಮರ್(ﷺ)ರವರ ಈ ಪ್ರವೃತ್ತಿಯು ಶರೀಅತ್ತಿನಲ್ಲಿ ಸೇರಿದ್ದಾಗಿದೆ ಮತ್ತು ಒಂದು ಹಿಡಿಗಿಂತ ಹೆಚ್ಚಿಗೆ ಇರುವುದನ್ನು ಕತ್ತರಿಸುವುದು ಸುನ್ನತ್ ಆಗಿದೆಯೆಂದು ಕೆಲವರು ಭಾವಿಸುತ್ತಾರೆ. ಇತರ ಕೆಲವರು ಈ ವಿಷಯದಲ್ಲಿ ಮಿತಿಮೀರಿ ಒಂದು ಹಿಡಿಗಿಂತ ಹೆಚ್ಚು ಗಡ್ಡ ಬೆಳೆಸುವುದು ಹರಾಮ್ ಆಗಿದೆಯೆಂದು ಹೇಳುತ್ತಾರೆ. ಇದು ಅರ್ಥ ಮಾಡಿಕೊಳ್ಳುವುದರಲ್ಲಿರುವ ಪ್ರಮಾದ ವಾಗಿದೆಯೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಪಾಠವಿರುವುದು ಪ್ರವಾದಿ(ﷺ) ರವರ ವಚನದಲ್ಲಾಗಿದೆ.

ಮೂಲ: http://www.ibnothaimeen.com/all/noor/article_1296.shtml

## ಮದ್‌ಹಬ್‌ಗಳ ಉಲಮಾಗಳು ಏನೆನ್ನುತ್ತಾರೆ?

**1. ಹನಫೀ ಉಲಮಾಗಳು:**

ಅಬೂ ಹನೀಫಃರ ಶಿಷ್ಯರಾದ ಮುಹಮ್ಮದ್ ಇಬ್ನುಲ್ ಹಸನ್ ಹೇಳುತ್ತಾರೆ:

أَخْبَرَنَا أَبُو حَنِيفَةَ عَنِ الْهَيْثَمِ عَنِ ابْنِ عُمَرَ: أَنَّهُ كَانَ يَقْبِضُ عَلَى لِحْيَتِهِ ثُمَّ يَقُصُّ مَا تَحْتَ الْقَبْضَةِ. قَالَ مُحَمَّدٌ: وَبِهِ نَأْخُذُ. وَهُوَ قَوْلُ أَبِي حَنِيفَةَ.

**"ಅಬೂ ಹನೀಫಃರವರು ನಮಗೆ ಅಲ್‌ಹೈಸಮ್‌ರಿಂದ ಅವರು ಇಬ್ನ್ ಉಮರ್(ﷺ) ರಿಂದ ತಿಳಿಸಿದ್ದಾರೆ: ಇಬ್ನ್ ಉಮರ್(ﷺ)ರವರು ತಮ್ಮ ಗಡ್ಡವನ್ನು ಹಿಡಿಯುತ್ತಿದ್ದರು. ತರುವಾಯ ಒಂದು ಹಿಡಿಗಿಂತ ಹೆಚ್ಚಿನದ್ದನ್ನು ಕತ್ತರಿಸುತ್ತಿದ್ದರು. ಮುಹಮ್ಮದ್ ಇಬ್ನುಲ್ ಹಸನ್ ಹೇಳುತ್ತಾರೆ: ಇದೇ ನಮ್ಮ ಅಭಿಪ್ರಾಯವಾಗಿದೆ. ಅಬೂ ಹನೀಫಃರವರ ಅಭಿಪ್ರಾಯವೂ ಇದೇ ಆಗಿದೆ." [ಅಲ್‌ಆಸಾರ್ 900]**

ಇಬ್ನುಲ್ ಆಬಿದೀನ್ ಹೇಳುತ್ತಾರೆ:

الْأَخْذُ مِنَ اللِّحْيَةِ دُونَ الْقَبْضَةِ كَمَا يَفْعَلُهُ بَعْضُ الْمَغَارِبَةِ وَمُخَنَّثَةِ الرِّجَالِ لَمْ يُبِحْهُ أَحَدٌ.

**"ಮೊರೊಕ್ಕೋಗಳಲ್ಲಿ ಕೆಲವರು ಮತ್ತು ಪುರುಷರಲ್ಲಿರುವ ಶಿಖಂಡಿಗಳು ಮಾಡುವಂತೆ ಗಡ್ಡವನ್ನು ಒಂದು ಹಿಡಿಗಿಂತ ಕಡಿಮೆ ಕತ್ತರಿಸುವುದನ್ನು ಯಾರೂ ಅನುಮತಿಸಿಲ್ಲ." [ಅಲ್‌ಹಾಶಿಯಃ 2/417]**

**2. ಮಾಲಿಕೀ ಉಲಮಾಗಳು:**

'ಅಲ್‌ಮವಾಹಿಬುಲ್ ಜಲೀಲ್ ಶರ್ಹ್ ಮುಖ್ತಸರಿ ಶೈಖ್ ಖಲೀಲ್' ಎಂಬ ಗ್ರಂಥದಲ್ಲಿ ಹೀಗಿದೆ:

وَحَلْقُ اللِّحْيَةِ لَا يَجُوزُ وَكَذَلِكَ الشَّارِبُ، وَهُوَ مُثْلَةٌ وَبِدْعَةٌ، وَيُؤَدَّبُ مَنْ حَلَقَ لِحْيَتَهُ أَوْ شَارِبَهُ.

**"ಗಡ್ಡವನ್ನು ಬೋಳಿಸುವುದಕ್ಕೆ ಅನುಮತಿಯಿಲ್ಲ. ಹಾಗೆಯೇ ಮೀಸೆಯನ್ನು ಬೋಳಿಸು ವುದಕ್ಕೂ ಅನುಮತಿಯಿಲ್ಲ. ಅದೊಂದು ಆಪತ್ತು ಮತ್ತು ಬಿದ್‌ಅತ್ ಆಗಿದೆ. ಗಡ್ಡ ಮತ್ತು ಮೀಸೆ ಬೋಳಿಸುವವನಿಗೆ ಶಿಕ್ಷಣ ನೀಡಬೇಕಾಗಿದೆ."**

ಅಬುಲ್ ಹಸನ್ ಅಲ್‌ಮಾಲಿಕೀ ತಮ್ಮ 'ಶರ್ಹ್'ನಲ್ಲಿ ಮತ್ತು ಅಲ್‌ಅದವೀ ತಮ್ಮ 'ಅಲ್‌ಹಾಶಿಯಃ ಅಲಾ ಕಿಫಾಯತಿ ತ್ತಾಲಿಬ್'ನಲ್ಲಿ ಒಮ್ಮತವಾಗಿ ಹೇಳಿದ ಪ್ರಕಾರ ಪುರುಷನಿಗೆ ಸಂಬಂಧಿಸಿದಂತೆ ಗಡ್ಡವನ್ನು ಬೋಳಿಸುವುದು ಹರಾಮ್ ಆಗಿರುವ ಬಿದ್‌ಅತ್ ಆಗಿದೆ.

ಅಬುಲ್ ಅಬ್ಬಾಸ್ ಅಲ್‌ಕುರ್ತುಬೀ ಅಲ್‌ಮಾಲಿಕೀ ತಮ್ಮ 'ಅಲ್‌ಮುಫ್‌ಹಮ್'ನಲ್ಲಿ ಹೇಳುತ್ತಾರೆ:

لَا يَجُوزُ حَلْقُهَا وَلَا نَتْفُهَا وَلَا قَصُّ الْكَثِيرِ مِنْهَا.

**"ಗಡ್ಡವನ್ನು ಬೋಳಿಸುವುದಕ್ಕೆ, ಕೀಳುವುದಕ್ಕೆ ಮತ್ತು ಬಹಳ ಹೆಚ್ಚು ಕತ್ತರಿಸುವುದಕ್ಕೆ ಅನುಮತಿಯಿಲ್ಲ."**

### 3. ಶಾಫಿಈ ಉಲಮಾಗಳು:

ಅಶ್ಶಾಫಿಈ ತಮ್ಮ 'ಅಲ್‌ಉಮ್ಮ್'ನಲ್ಲಿ ಗಡ್ಡ ಬೋಳಿಸುವುದನ್ನು ಹರಾಮ್ ಎಂದಿದ್ದಾರೆ. ಅಲ್‌ಹಲೀಮೀ ಅಶ್ಶಾಫಿಈ ಹೇಳುತ್ತಾರೆ:

لَا يَحِلُّ لِأَحَدٍ أَنْ يَحْلِقَ لِحْيَتَهُ وَلَا حَاجِبَيْهِ.

**"ಗಡ್ಡ ಮತ್ತು ಹುಬ್ಬನ್ನು ಬೋಳಿಸುವುದು ಯಾರಿಗೂ ಧರ್ಮಸಮ್ಮತವಲ್ಲ." [ಇಬ್ನುಲ್ ಮುಲಕ್ಕನ್‌ರವರ ಅಲ್‌ಇಅ್‌ಲಾಮ್ 1/711]**

ಅನ್ನವವೀ 'ಶರ್ಹ್ ಮುಸ್ಲಿಮ್'ನಲ್ಲಿ (3/151) ಹೇಳುತ್ತಾರೆ:

وَجَاءَ فِي رِوَايَةِ الْبُخَارِيِّ «وَفِّرُوا اللِّحَى» فَحَصَلَ خَمْسُ رِوَايَاتٍ أَعْفُوا وَأَوْفُوا وَأَرْخُوا وَارْجُوا وَوَفِّرُوا، وَمَعْنَاهَا كُلِّهَا تَرْكُهَا عَلَى حَالِهَا، هَذَا هُوَ الظَّاهِرُ مِنَ الْحَدِيثِ الَّذِي تَقْتَضِيهِ أَلْفَاظُهُ، وَهُوَ الَّذِي قَالَهُ جَمَاعَةٌ مِنْ أَصْحَابِنَا وَغَيْرِهِمْ مِنَ الْعُلَمَاءِ. وَالْمُخْتَارُ تَرْكُ اللِّحْيَةِ عَلَى حَالِهَا وَأَلَّا يَتَعَرَّضَ لَهَا بِتَقْصِيرِ شَيْءٍ أَصْلًا، وَالْمُخْتَارُ فِي الشَّارِبِ تَرْكُ الِاسْتِئْصَالِ وَالِاقْتِصَارِ عَلَى مَا يَبْدُو بِهِ طَرْفُ الشَّفَةِ. وَاللَّهُ أَعْلَمُ.

**"ಅಲ್‌ಬುಖಾರಿ ಉದ್ಧರಿಸಿದ ವರದಿಯಲ್ಲಿ ನೀವು ಗಡ್ಡವನ್ನು ಬೆಳೆಸಿರಿ ಎಂದಿದೆ. ಐದು ವರದಿಗಳಲ್ಲಿ ಬೇರೆ ಬೇರೆ ಪದಗಳೊಂದಿಗೆ ಗಡ್ಡವನ್ನು ಬೆಳೆಸಿರಿ ಎಂದು ಹೇಳಲಾಗಿದೆ. ಇದರ ಅರ್ಥ ಗಡ್ಡವನ್ನು ಸಂಪೂರ್ಣವಾಗಿ ಅದು ಹೇಗಿದೆಯೋ ಹಾಗೆಯೇ ಬಿಟ್ಟುಬಿಡುವುದಾಗಿದೆ. ಹದೀಸಿನ ಪದಗಳು ಆವಶ್ಯಪಡುವ ಪ್ರಕಾರ ಹದೀಸಿನ ಬಾಹ್ಯಾರ್ಥವು ಇದಾಗಿದೆ. ಇದು ನಮ್ಮ ಮದ್‌ಹಬ್‌ನಲ್ಲಿ ಸೇರಿದ ಉಲಮಾಗಳ ಹಾಗೂ**

**ಮತ್ತಿತರ ಉಲಮಾಗಳ ಅಭಿಪ್ರಾಯವಾಗಿದೆ. ಅತ್ಯಂತ ಸರಿಯಾದ ಅಭಿಪ್ರಾಯವು ಗಡ್ಡವನ್ನು ಅದರಷ್ಟಕ್ಕೆ ಬಿಟ್ಟುಬಿಡುವುದಾಗಿದೆ. ಅದರಿಂದ ಏನನ್ನೂ ಗಿಡ್ಡಗೊಳಿಸಲು ಮುಂದಾಗಬಾರದು. ಮೀಸೆಯ ವಿಷಯದಲ್ಲಿ ಸರಿಯಾದ ಅಭಿಪ್ರಾಯವು ಅದನ್ನು ಪೂರ್ಣವಾಗಿ ನೀಗಿಸುವುದನ್ನು ಮಾಡಬಾರದು ಮತ್ತು ತುಟಿಯ ತುದಿಯು ಕಾಣುವ ರೀತಿಯಲ್ಲಿ ಅದನ್ನು ಗಿಡ್ಡಗೊಳಿಸಬೇಕು ಎಂಬುದಾಗಿದೆ. ಅಲ್ಲಾಹು ಅಅ್‌ಲಮ್"**

4. ಹಂಬಲೀ ಉಲಮಾಗಳು:

ಇಬ್ನುಲ್ ಮುಫ್ಲಿಹ್ ಹೇಳುತ್ತಾರೆ:

وَيَحْرُمُ حَلْقُهَا.

**"ಗಡ್ಡವನ್ನು ಬೋಳಿಸುವುದು ಹರಾಮ್ ಆಗಿದೆ." [ಅಲ್‌ಫುರೂಅ್ 1/92]**

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ಹೇಳುತ್ತಾರೆ:

وَيَحْرُمُ حَلْقُ اللِّحْيَةِ.

**"ಗಡ್ಡ ಬೋಳಿಸುವುದು ಹರಾಮ್ ಆಗಿದೆ." [ಅಲ್‌ಫುರೂಅ್ 2/129]**

ಅಶ್ಶೈಖ್ ಅಲೀ ಮಹ್ಫೂಝ್ ಹೇಳುತ್ತಾರೆ:

وَقَدِ اتَّفَقَتِ الْمَذَاهِبُ الْأَرْبَعَةُ عَلَى وُجُوبِ تَوْفِيرِ اللِّحْيَةِ وَحُرْمَةِ حَلْقِهَا.

**"ಗಡ್ಡವನ್ನು ಬೆಳೆಸುವುದು ಕಡ್ಡಾಯವಾಗಿದೆ ಮತ್ತು ಅದನ್ನು ಬೋಳಿಸುವುದು ನಿಷಿದ್ಧವಾಗಿದೆಯೆಂಬ ವಿಷಯದಲ್ಲಿ ನಾಲ್ಕು ಮದ್‌ಹಬ್‌ಗಳೂ ಒಮ್ಮತಾಭಿಪ್ರಾಯವನ್ನು ಹೊಂದಿವೆ." [ಅಲ್‌ಇಬ್ದಾಅ್ 409]**

ಗಡ್ಡ ಬೋಳಿಸುವುದು ಹರಾಮ್ ಆಗಿದೆ ಎಂಬ ವಿಷಯದಲ್ಲಿ ಉಲಮಾಗಳು ಒಮ್ಮತಾಭಿಪ್ರಾಯ ಹೊಂದಿದ್ದಾರೆಂದು ಇಬ್ನ್ ಹಝ್ಮ್‌ರವರು ತಮ್ಮ 'ಅಲ್‌ಮುಹಲ್ಲಾ' ದಲ್ಲಿ (2/220) ಇಜ್ಮಾಅನ್ನು ಉದ್ಧರಿಸಿದ್ದಾರೆ. 'ಮರಾತಿಬುಲ್ ಇಜ್ಮಾಅ್'ನಲ್ಲೂ (ಪುಟ 182) ಗಡ್ಡ ಬೋಳಿಸುವುದು ಹರಾಮ್ ಆಗಿದೆಯೆಂಬ ವಿಷಯದಲ್ಲಿ ಉಲಮಾಗಳು ಒಮ್ಮತಾಭಿಪ್ರಾಯ ಹೊಂದಿದ್ದಾರೆಂದು ಹೇಳಲಾಗಿದೆ.

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********